# ಬೆಂಕಿ ಅವಘಡ: ತಂದೆ–ಮಗ ಸಾವು

ಪ್ರಜಾವಾಣಿ ವಾರ್ತೆ

**ಕೊಳ್ಳೇಗಾಲ:** ಆಕಸ್ಮಿಕ ಬೆಂಕಿ ಅವಘಡದಲ್ಲಿ ತಂದೆ-ಮಗ ಸ್ಥಳದಲ್ಲೇ ಮೃತಪಟ್ಟಿದ್ದು, ಇತರೆ ಇಬ್ಬರು ಗಾಯಗೊಂಡಿರುವ ಘಟನೆ ತಾಲ್ಲೂಕಿನ ಧನಗೆರೆ ಗ್ರಾಮದಲ್ಲಿ ಭಾನುವಾರ ಬೆಳಗಿನ ಜಾವ ಸಂಭವಿಸಿದೆ.

ವೆಂಕಟರಮಣ (60), ಅವರ ಪುತ್ರ ವೆಂಕಟೇಶ (42) ಮೃತರು. ಪುಟ್ಟ ಮಾದನಾಯ್ಕ, ಸಿದ್ದರಾಜು ಅವರಿಗೆ ಸುಟ್ಟಗಾಯಗಳಾಗಿವೆ.

**ಘಟನೆ ವಿವರ:** ಗ್ರಾಮದ ನಾಯಕರ ಬಡಾವಣೆಯ ನಿವಾಸಿ ವೆಂಕಟರಮಣ ಅವರು ವಾಸವಿದ್ದ ಗುಡಿಸಲಿಗೆ ಬೆಳಗಿನ ಜಾವ ಬೆಂಕಿ ಬಿದ್ದಿದ್ದು, ಕೂಗಾಟ ಕೇಳಿ ಪಕ್ಕದ ಗುಡಿಸಲಿನಲ್ಲಿದ್ದ ಪುತ್ರ ವೆಂಕಟೇಶ್, ಮಾವ ಪುಟ್ಟಮಾದನಾಯ್ಕ, ನೆರೆಮನೆಯ ಸಿದ್ದರಾಜು ಧಾವಿಸಿದ್ದಾರೆ.

ಆ ವೇಳೆಗೆ ಬೆಂಕಿ ವೆಂಕಟರಮಣ ಅವರನ್ನು ಆವರಿಸಿದ್ದು, ರಕ್ಷಣೆಗೆ ಧಾವಿಸಿದ ವೆಂಕಟೇಶ್, ಬೆಂಕಿಯಿಂದ ಸುಟ್ಟು ಕೆಳಗೆ ಬಿದ್ದಿದ್ದ ವಿದ್ಯುತ್ ತಂತಿ ಸ್ಪರ್ಶಿಸಿ ಮೃತಪಟ್ಟರು.

ಈ ಇಬ್ಬರ ರಕ್ಷಣೆಗೆ ಧಾವಿಸಿದ ಇಬ್ಬರಿಗೂ ಸುಟ್ಟಗಾಯಗಳಾದವು. ಆ ವೇಳೆಗೆ ಸ್ಥಳಕ್ಕೆ ಧಾವಿಸಿದ ಅಗ್ನಿಶಾಮಕ ಸಿಬ್ಬಂದಿ ಬೆಂಕಿಯನ್ನು ನಂದಿಸಿದ್ದು, ಇತರೆ ಗುಡಿಸಲುಗಳಿಗೆ ವ್ಯಾಪಿಸದಂತೆ ಕ್ರಮವನ್ನು ಕೈಗೊಂಡರು.

ಅಗ್ನಿ ಆಕಸ್ಮಿಕಕ್ಕೆ ವಿದ್ಯುತ್ ಶಾರ್ಟ್ ಸರ್ಕಿಟ್ ಕಾರಣ ಎನ್ನಲಾಗಿದೆ. ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಗ್ರಾಮಾಂತರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿ ಕೊಂಡಿದ್ದಾರೆ.

12-12-16 (2)

# ಚಂದ್ರನಿಂದ ಭೂಮಿಗೆ ಸೌರ ವಿದ್ಯುತ್

ವಿದ್ಯುತ್ ಸಮಸ್ಯೆ ಇಡೀ ಜಗತ್ತನ್ನು ಕಾಡುತ್ತಿರುವ ದಿನಗಳಲ್ಲಿ ಚಂದ್ರನಲ್ಲಿ ಸೌರ ವಿದ್ಯುತ್ ಉತ್ಪಾದಿಸಿ ಅದನ್ನು ಭೂಮಿಗೆ ತರುವ ಯೋಜನೆಯೊಂದನ್ನು ಜಪಾನ್‌ನ ಕಂಪನಿ ರೂಪಿಸಿದೆ. ಜಪಾನ್‌ನ ಶಿಮಿಜು ಕಂಪನಿಯ ಲೂನಾ ಯೋಜನೆ ಚಂದ್ರನ ಸಮಭಾಜಕ ವೃತ್ತದಲ್ಲಿ 6,790 ಮೈಲಿ ಸೋಲಾರ್ ಫಲಕವನ್ನು ಸ್ಥಾಪಿಸಿ ವಿದ್ಯುತ್ ಉತ್ಪಾದಿಸುವ ಗುರಿ ಹೊಂದಿದೆ. ಪ್ರತಿಯೊಂದು ಸೋಲಾರ್ ಫಲಕ ಸುಮಾರು 250 ಮೈಲಿ ಅಗಲವಾಗಿರಲಿದೆ. ಒಮ್ಮೆ ಈ ಸೋಲಾರ್ ವೃತ್ತ ನಿರ್ಮಾಣಗೊಂಡರೆ ಅಪರಿಮಿತ ವಿದ್ಯುತ್ ಸಂಪನ್ಮೂಲವನ್ನು ನೀಡಲಿದೆ. ಈ ಯೋಜನೆಯಿಂದ 13000 ಟೆರಾವ್ಯಾಟ್ ನಿರಂತರ ವಿದ್ಯುತ್ ಉತ್ಪಾದನೆ ನಿರೀಕ್ಷಿಸಲಾಗುತ್ತಿದೆ. ■